**<u>ಸಾಕ್ಷಿಗೆ ದಿನಾಂಕ:25-10-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

**<u>:: ಪಾಟೀ ಸವಾಲು :: ಆರೋಪಿ ಪರ ಶ್ರೀ. H E M ವಕೀಲರಿಂದ ::</u>**

1. ನಾನು ಪಿರ್ಯಾದಿದಾರರ ಸೊಸೈಟಿಯಲ್ಲಿ 10 ವರ್ಷದಿಂದ C.E.O ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿನ ಮಾಹಿತಿಯನ್ನು ನಾನೇ ನಮ್ಮ ಸೊಸೈಟಿಯ ವಕೀಲರಿಗೆ ನೀಡಿರುತ್ತೇನೆ ಎಂದರೆ ಸರಿ. ಪ್ರಕರಣದ ಸಾಲವು ನಮ್ಮ ಸೊಸೈಟಿಗೆ ಸಂಬಂಧ ಪಟ್ಟದ್ದಾಗಿರುತ್ತದೆ, ನಾನು ನೀಡಿದ ವೈಯುಕ್ತಿಕ ಸಾಲ ಆಗಿರುವುದಿಲ್ಲ. ನಿಪಿ-1 ಚೆಕ್ ನಲ್ಲಿ ಅದರ Drawee ಅನ್ನು PACS ಹಾಲಂದೂರು ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಆರೋಪಿ ನನಗೆ ವೈಯುಕ್ತಿಕವಾಗಿ ನಿಪಿ-1 ಚೆಕ್ ಅನ್ನು ನೀಡಿರುವುದಿಲ್ಲ ಅದನ್ನು PACS ಹಾಲಂದೂರು ಗೆ ನೀಡಿರುತ್ತಾರೆ ಎಂದರೆ ಸರಿ.

2. ನನ್ನ ಪಿರ್ಯಾದಿಯಲ್ಲಿ ನನ್ನ ಹೆಸರು ಮೊದಲು ನಮೂದಿಸಿ ನಂತರ ನಾನು PACS ಹಾಲಂದೂರಿನ C.E.O ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ನಾನು ಹೇಳುವಂತೆಯೇ ಪ್ರಕರಣದ ವ್ಯವಹಾರವು ನಮ್ಮ ಸೊಸೈಟಿಯ ಜೊತೆ ಆಗಿರುವ ಕಾರಣ ಆ ರೀತಿ ನನ್ನ ವೈಯುಕ್ತಿಕ ನೆಲೆಯಲ್ಲಿನಾನು ಈ ಪ್ರಕರಣದ ದೂರನ್ನು ಸಲ್ಲಿಸಲು ಕಾನೂನಡಿಯಲ್ಲಿ ಬರುವುದಿಲ್ಲ ಎಂರದೆ ಸಾಕ್ಷಿಯು ನಾನು ನಮ್ಮ ಸೊಸೈಟಿಯ C.E.O ನೆಲೆಯಲ್ಲಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಅದೇ ರೀತಿ ನಿಪಿ -3 ಕಾನೂನು ತಿಳುವಳಿಕೆ ನೋಟೀಸಲ್ಲಿಯೂ ಸಹ ನನ್ನ ವೈಯುಕ್ತಿಕ ನೆಲೆಯಲ್ಲಿಯೇ ಅದನ್ನು ಜಾರಿ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ನಾನು ನಮ್ಮ ಸೊಸೈಟಿಯ C.E.O ನೆಲೆಯಲ್ಲಿ ಅದನ್ನು ಜಾರಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ.

3. ಆರೋಪಿಗೆ ನಮ್ಮ ಸೊಸೈಟಿಯಿಂದ 2020 ನೇ ಸಾಲಿನಲ್ಲಿ ಸಾಲವನ್ನು ನೀಡಿರುತ್ತೇವೆ. ಯಾವ ದಿನಾಂಕದಂದು ಆ ರೀತಿ ಸಾಲವನ್ನು ನೀಡಿರುತ್ತೇವೆ ಎಂದು ನನಗೆ ನಿಖರವಾಗಿ ಹೇಳಲು ನೆನಪಿಲ್ಲ, ಆದರೆ ದಾಖಲಾತಿಗಳನ್ನು ಪರಿಶೀಲಿಸಿ ಹೇಳಬಹುದು ಎಂದು ನುಡಿದಿರುತ್ತಾರೆ. ಯಾವ ದಿನಾಂಕದಂದು ಆರೋಪಿಗೆ ನಮ್ಮ ಸೊಸೈಟಿಯಿಂದ ಸಾಲವನ್ನು ನೀಡಲಾಗಿರುತ್ತದೆ ಎಂದು ನಮ್ಮ ಪಿರ್ಯಾದಿಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸದರಿ

ಸಾಲವನ್ನು ಆರೋಪಿಗೆ ಆತನು ವಾಹನ ಖರೀದಿಸುವ ಸಲುವಾಗಿ ನೀಡಲಾಗಿರುತ್ತದೆ. ಸದರಿ ಸಾಲವನ್ನು ನಮ್ಮ ಸೊಸೈಟಿಯ ಸ್ವಂತ ಬಂಡವಾಳದಿಂದ ನೀಡಲಾಗಿರುತ್ತದೆ.

**(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.